ಬೆಳಗಾಂವ್‌ನಲ್ಲಿರುವ ಹಿಂಡಲವಾ ಜೈಲಿನ ದುಃಸ್ಥಿತಿ

146 (455) ಶ್ರೀ ಜೆ.ಡಿ. ನಾಯ್ಕ (ಭಟ್ಕಳ): ಮಾನ್ಯ ಸಮಾಜ ಕಲ್ಯಾಣ ಹಾಗೂ ಬಂಧೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾಂನಲ್ಲಿರುವ ಹಿಂಡಲಗಾ ಜೈಲನ್ನು ಯಾವ ವರ್ಷದಲ್ಲಿ ಕಟ್ಟಲಾಯಿತು, ಇದರ ಉಸ್ತುವಾರಿ (ನಿರ್ವಹಣೆಗೆ) ವಿವಿಧ ಹಂತದಲ್ಲಿ ಪ್ರತಿವರ್ಷ ಖರ್ಚು ಮಾಡುವ ಹಣವೆಷ್ಟು (ಕಳೆದ ಮೂರು ವರ್ಷದ ವಿವರಣೆ ನೀಡುವುದು);

ಆ) ಜೈಲಿನ ಕಟ್ಟಡದ ಕೆಲವು ಭಾಗಗಳು ಮತ್ತು ಪುಟ್‌ಪಾತ್ ರಸ್ತೆಗಳು ತುಂಬಾ ಹಾಳಾಗಿ ಉಪಯೋಗಕ್ಕೆ ಅನುಪಯುಕ್ತವಾಗಿರುವುದನ್ನು ಸರ್ಕಾರ ಗಮನಿಸಿದೆಯೇ;

ಇ) ಜೈಲಿನಲ್ಲಿ ಎಷ್ಟು ಕೈದಿಗಳನ್ನಿಡಲು ವ್ಯವಸ್ಥೆ ಇರುತ್ತದೆ. ಹಾಲಿ ವಿವಿಧ ಅಪರಾಧದ ಅಡಿಯಲ್ಲಿ ಜೈಲಿನಲ್ಲಿರುವ ಕೈದಿಗಳ ಸಂಖ್ಯೆ ಎಷ್ಟು;

ಈ) ಕೈದಿಗಳಿಗೆ ಊಟಕ್ಕೆ ಸುವ್ಯವಸ್ಥೆ ಅಡಿಗೆಮನೆ/ ಅಡುಗೆ ಪಾತ್ರೆಗಳಿಲ್ಲದೇ ಅಲ್ಲಿಯ ಊಟ ಮಾಡಿದ ಕೈದಿಗಳ ಆರೋಗ್ಯ ಪರಿಸ್ಥಿತಿ ಸರಿಯಾಗಿಲ್ಲದೆ ಇರುವುದನ್ನು ಸರ್ಕಾರ ಗಮನಿಸಿದೆಯೆ;

ಉ) ಜೈಲಿನಲ್ಲಿರುವ ಕೈದಿಗಳ ಯೋಗಕ್ಷೇಮ ಹಾಗೂ ಖಾಯಿಲೆಗಳ ಉಪಚಾರಕ್ಕೆ ವೈದ್ಯಾಧಿಕಾರಿ ಹಾಗೂ ಔಷಧಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಊ) ಜೈಲಿನ ಉಸ್ತುವಾರಿ ವಿವಿಧ ಕಾರ್ಯಗಳಿಗೆ ಮಂಜೂರಾದ ಮತ್ತು ಹಾಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳೆಷ್ಟು? (ಹುದ್ದೆವಾರು ವಿವರ ನೀಡುವುದು);

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಹಾಗೂ ಬಂದೀಖಾನೆ ಸಚಿವರು):

ಅ) ಬೆಳಗಾಂನಲ್ಲಿರುವ ಕೇಂದ್ರ ಕಾರಾಗೃಹವನ್ನು 1923ನೇ ಸಾಲಿನಲ್ಲಿ ಸ್ಥಾಪಿಸಲಾಗಿದೆ. ಕಳೆದ ಮೂರು ವರ್ಷದಿಂದ ಅನುದಾನ ಲಭ್ಯವಿಲ್ಲದ ಕಾರಣ ಕಟ್ಟಡದ ನಿರ್ವಹಣೆಗೆ ಯಾವುದೇ ಹಣ ಖರ್ಚು ಮಾಡಲಾಗುವುದಿಲ್ಲ.

ಆ) ಹೌದು.

ಇ) ಜೈಲಿನಲ್ಲಿ ಕೆಳಕಂಡಂತೆ ಬಂದಿಗಳನ್ನಿಡಲು ಅವಕಾಶ ಕಲ್ಪಿಸಲಾಗಿದೆ.

ಪುರುಷ	ಮಹಿಳೆ	ಒಟ್ಟು
1085	77	1162

ಹಾಲಿ ಜೈಲಿನಲ್ಲಿ ಕೆಳಕಂಡಂತೆ ಬಂದಿಗಳಿರುತ್ತಾರೆ

ಪುರುಷ	ಮಹಿಳೆ	ಒಟ್ಟು
781	56	837

ಈ) ಬಂದಿಗಳ ಆರೋಗ್ಯ ಸ್ಥಿತಿ ಸಮಾಧಾನಕರವಾಗಿದ್ದು, ಅವಶ್ಯವಿರುವವರಿಗೆ ಅಗತ್ಯ ವೈದ್ಯಕೀಯ ಸೇವೆ ಮತ್ತು ಔಷಧಿಗಳನ್ನು ನೀಡಲಾಗುತ್ತಿದೆ. ಅಡುಗೆಮನೆ ಮತ್ತು ಅಡಿಗೆ ಪಾತ್ರೆಗಳು ಈ ಸದ್ಯ ಸಮರ್ಪಕವಾಗಿಯೇ ಇದೆ. ಆದರೂ ಹಳೆಯದಾಗಿರುವ ಕಾರಣ ಅದನ್ನು ತಯಾರಿಸುವ ಆಧುನಿಕ ಮಾದರಿಯ ಪಾತ್ರೆಗಳ ಖರೀದಿಗೆ ದರಖಾಸ್ತು ಪ್ರಕ್ರಿಯೆ ಈಗಾಗಲೇ ಪ್ರಗತಿಯಲ್ಲಿದೆ.

ಉ) ಬೆಳಗಾಂ ಕೇಂದ್ರ ಕಾರಾಗೃಹಕ್ಕೆ 03 ಸಂಖ್ಯೆ ವೈದ್ಯಾಧಿಕಾರಿಗಳ ಹುದ್ದೆ ಮಂಜೂರಾಗಿದೆ. ಹಾಲಿ ಒಬ್ಬ ವೈದ್ಯಾಧಿಕಾರಿಗಳು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದಾರೆ, ಬಂದಿಗಳ ಖಾಯಿಲೆಗಳಿಗೆ ಅಗತ್ಯವಿರುವ ಔಷಧಿಗಳನ್ನು ಸಕಾಲದಲ್ಲಿ ಒದಗಿಸಲಾಗುತ್ತಿದೆ. ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.

ಊ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ದಿನಾಂಕ:31–08–2010ರಂದು ಇದ್ದಂತೆ ಕೇಂದ್ರ ಕಾರಾಗೃಹ, ಬೆಳಗಾವಿಗೆ ಮಂಜೂರಾದ ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿ ಹುದ್ದೆಗಳ ವಿವರಣಾ ಪಟ್ಟಿ

ಕ್ರ. ಸಂ.	ಹುದ್ದೆಗಳ ಹೆಸರು	ವೇತನಶ್ರೇಣಿ	ಮಂಜೂರಾದ ಹುದ್ದೆಗಳು	ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳು	ಖಾಲಿ ಹುದ್ದೆಗಳು
1	ಮುಖ್ಯ ಅಧೀಕ್ಷಕರು	18150–26925	1	1	0
2	ಅಧೀಕ್ಷಕರು	14050–25050	1	1	0
3	ವೈದ್ಯಾಧಿಕಾರಿಗಳು	14050–25050	3	1	2

4	ಸಹಾಯಕ ಅಧೀಕ್ಷಕರು	10800–20050	1	1	0
5	ಕಾರ್ಖಾನೆ ವ್ಯವಸ್ಥಾಪಕರು	10800–20050	1	0	1
6	ಸಹಾಯಕ ಕೃಷಿ ಅಧಿಕಾರಿ	10800–20050	1	1	0
7	ಲೆಕ್ಕಾಧೀಕ್ಷಕರು	10800–20050	1	1	0
8	ಕಚೇರಿ ಅಧೀಕ್ಷಕರು	1000–18150	1	1	0
9	ಪ್ರಮುಖ ಕಾರ್ಯಪಾಲರು/ ಕಾರ್ಯಪಾಲರು	8825–1600	5	3	2
10	ಪ್ರಥಮ ದರ್ಜೆ ಸಹಾಯಕರು	7275–13350	5	5	0
11	ಬೆರಳಚ್ಚುಗಾರರು	5800–10500	2	2	0
12	ದ್ವಿತೀಯ ದರ್ಜೆ ಸಹಾಯಕರು	5800–10500	7	7	0
13	ಉಪಾಧ್ಯಾಯರು	6250–12000	2	1	1
14	ಉಪಾಧ್ಯಾಯಿನಿ	6250–12000	1	1	0
15	ಕೃಷಿ ಸಹಾಯಕರು	6250–12000	1	0	1
16	ಕಿರಿಯ ಪ್ರಯೋಗ ತಂತ್ರಜ್ಞ	7275–13350	1	1	0
17	ಔಷಧ ಸಂಯೋಜಕರು	7275–13350	2	2	0
18	ಎಕ್ಸರೇ ಟೆಕ್ನಿಷಿಯನ್	7275–13350	1	1	0
19	ಎಕ್ಸರೇ ಅಟೆಂಡರ್	4800–7275	1	0	1
20	ಪ್ರಮುಖ ವೀಕ್ಷಕರು	7275–13350	6	6	0
21	ಮುಖ್ಯವೀಕ್ಷಕರು	6250–12000	25	25	0
22	ವೀಕ್ಷಕರು	5800–10500	67	66	1
23	ವಾಹನ ಚಾಲಕರು	5800–10500	3	1	2
24	ವಾಹನ ಸ್ವಚ್ಛಕರು/ ಜವಾನರು	4800–7275	2	1	1
25	ಅಟೆಂಡರ್	4800–7275	1	1	0
26	ನರ್ಸಿಂಗ್ ಆರ್ಡರ್ಲೀ	5200–8200	3	1	2
27	ಪಶು ವೈದ್ಯ ಪರೀಕ್ಷಕರು	6250–12000	1	1	0
28	ಬಾರ್ಬರ್	4800–7275	1	1	0
29	ಪ್ರಮುಖ ಬೋಧಕರು	10000–18150	1	1	0
30	ಬೋಧಕರು ದರ್ಜೆ–1(ಹೊಲಿಗೆ–1, ಬಡಿಗೆ–1, ಕಮ್ಮಾರ–1, ನೇಯ್ಗೆ–1)	6250–12000	4	3	1
31	ಬೋಧಕರು ದರ್ಜೆ–2 (ನೇಯ್ಗೆ–1, ಬಡಿಗೆ–2)	6250–12000	3	0	3
32	ಕಮ್ಮಾರ	4800–7275	1	0	1
			156	137	19